ಸಿಸಿ ನಂ: 3433/2022

ಸಿ.ಡಬ್ಲೂ 4 /ಪಿ.ಡಬ್ಲೂ 4

**3 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಸಿಜೆಎಂ ರವರ ನ್ಯಾಯಾಲಯ ಧಾರವಾಡ.**

**ಸಿಸಿ ನಂ:** 3433/2022

| | | |
|---|---|---|
| ಸಾಕ್ಷಿದಾರರ ಹೆಸರು | ಃ | ಪ್ರಕಾಶ ಕಲ್ಲಿಹಾಳ |
| ತಂದೆಯ ಹೆಸರು | ಃ | ಕೃಷ್ಣಪ್ಪ |
| ವಯಸ್ಸು | ಃ | 62 ವರ್ಷ |
| ಉದ್ಯೋಗ | ಃ | ಖಾಸಗಿ ವ್ಯಾಪಾರ |
| ವಾಸ ಸ್ಥಳ | ಃ | ಸತ್ತೂರ ಧಾರವಾಡ |

**ಸತ್ಯ ಪ್ರತಿಜ್ಞೆ ಮಾಡಿಸಲಾಯಿತು ಃ 02-08-2024**

**ಮುಖ್ಯ ವಿಚಾರಣೆ ಮಾನ್ಯ ಹಿಸಸಅ ರವರಿಂದ.**

ಈಗ ನನಗೆ ತೋರಿಸುತ್ತಿರುವ ದಾಖಲೆಗೆ ಸಹಿ ಮಾಡಿರುತ್ತೇನೆ. ನನ್ನ ಸಹಿಯನ್ನು ನಿ.ಪಿ.2 (ಬಿ) ಎಂದು ಗುರುತಿಸಲಾಯಿತು. ಈಗ ನನಗೆ ತೋರಿಸುತ್ತಿರು ಪೋಟೊಗಳಲ್ಲಿ ನಾನು ಇರುತ್ತೇನೆ. ಅವುಗಳನ್ನು ಸತ್ತೂರಿನ ಪ್ರಕೃತಿನ ಲಾಡ್ಜನಲ್ಲಿ ತೆಗೆದಿರುತ್ತಾರೆ. ಚಾಸಾ 5 ರವರು ಆ ಸಮಯದಲ್ಲಿ ಹಾಜರಿದ್ದರು. ಪ್ರಕೃತಿ ಲಾಡ್ಜ ಪಕ್ಕ ಖಾನಾವಳಿ ಇರುತ್ತದೆ. ಲಾಡ್ಜ ನ ರೂಮ ಸಂಖ್ಯೆ ನೇನಪಿರುವುದಿಲ್ಲ. ಸದರಿ ಪೋಟೊಗಳನ್ನು ಅಂದಾಜು 2 ವರ್ಷದ ಹಿಂದೆ ತೆಗೆದಿರುತ್ತಾರೆ, ಸದರಿ ಪೋಟೊಗಳನ್ನು ಯಾವ ಕಾರಣಕ್ಕಾಗಿ ತೆಗದಿರುತ್ತಾರೆ ಎಂದು ಗೊತ್ತಿರುವುದಿಲ್ಲ. ಹಾಗೂ ಪಂಚನಾಮೆಯನ್ನು ಅದೇ ದಿನ ಮಾಡಿರುತ್ತಾರೆ. ಸದರಿ ಪಂಚನಾಮೆಗೆ ಗುನ್ನಾ ಸ್ಥಳವನ್ನು ಯಾರು ತೊರಿಸಿರುತ್ತಾರೆ ಎಂದು ಗೊತ್ತಿರುವುದಿಲ್ಲ.

**ಹಿರಿಯ ಸರಕಾರಿ ಅಬಿಯೋಜಕರ ವಿನಂತಿಯ ಮೇರೆಗೆ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಲಾಯಿತು. ಪಾಟೀ ಸವಾಲಿಗೆ ಅನೂಮತಿ ನೀಡಲಾಯಿತು.**

**ಪಾಟೀ ಸವಾಲುಃ ಹಿ.ಸ.ಸಾ.ಅ. ಅವರಿಂದ.**

ದಿಃ 21-08-2022 ರಂದು ಚಾಸಾ 1 ರವರು ಈ ಪ್ರಕರಣದ 1 ನೇ ಅರೋಪಿ ಪೊಲೀಸರ ಬೆಂಗಾವಲಿನಿಂದ ತಪ್ಪಿಸಿಕೊಂಡು ಹೊಗಲು ಪ್ರಯತ್ನಿಸುತ್ತಿದ್ದು ಆಗ ಪೊಲೀಸರು

ಬನ್ನಟ್ಟಿ ಹಿಡಿದ ಸ್ಥಳಗಳನ್ನು ತೋರಿಸಿರುತ್ತಾರೆ ಎಂದರೆ ಸರಿಯಲ್ಲ. ಚಾಸಾ 1 ನೇ ಆರೋಪಿ ತಪ್ಪಿಸಿಕೊಂಡು ಹೋಗಿ ಪೋಲೀಸರಿಗೆ ಸಿಕ್ಕಾಕಿಕೊಂಡ ಸ್ಥಳ ರೂಮ ಸಂಖ್ಯೆ 504 ಎಂದು ಹೇಳಿರುತ್ತಾರೆ ಮತ್ತು ಪಂಚನಾಮೆಯಲ್ಲಿ ಬರೆದಿರುತ್ತಾರೆ ಎಂದರೆ ಸರಿಯಲ್ಲ. ಆ ಸಮಯದಲ್ಲಿ ಚಾಸಾ 5 ರವರು ಹಾಜರಿದ್ದರು ಎಂದರೆ ಸರಿಯಲ್ಲ. ಪಂಚನಾಮೆ ಮಾಡಿದ್ದು ಹಾಗೂ ಈ ಪ್ರಕರಣದ ಸಂಗತಿ ನನಗೆ ಗೊತ್ತಿದ್ದರು ಕೂಡ ಆರೋಪಿತರಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ 2 ಮತ್ತು 5 ಆರೋಪಿ ಪರ ವಕೀಲರಿಂದ.**

ಪಂಚನಾಮೆಯಲ್ಲಿ ಏನು ಬರೆದಿರುತ್ತಾರೆ ಹಾಗೂ ಯಾರು ಬರೆದಿರುತ್ತಾರೆ ಎಂದು ಗೊತ್ತಿರುವುದಿಲ್ಲ ಎಂದರೆ ಸರಿ. ಪೋಲೀಸರು ಹೇಳಿದಂತೆ ಪಂಚನಾಮೆಗೆ ಸಹಿ ಮಾಡಿರುತ್ತೇನೆ ಎಂದರ ಸರಿ. ಪೋಲೀಸರು ಹೇಳಿದ ಕಾರಣಕ್ಕಾಗಿ ಮೇಲೆ ಹೇಳಿದ ಪೋಟೊಗಳಲ್ಲಿ ನಿಂತಿರುತ್ತೇನೆ ಕಾರಣ ಗೊತ್ತಿರುವುದಿಲ್ಲ.

ಉಳಿದ ಆರೋಪಿತರ ಪರ ವಕೀಲರು 2 ಮತ್ತು 5 ನೇ ಆರೋಪಿ ಪರ ವಕೀಲರು ಪಾಟೀ ಸವಾಲನ್ನು ಅಳವಡಿಸಿಕೊಂಡಿರುತ್ತಾರೆ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಅದೆ,

3 ನೇ ಹೆ ಹಿ ದಿ ನ್ಯಾ ಹಾಗೂ ಸಿಜೆಎಂ., ಧಾರವಾಡ.